ಅಪ್ಪನಿಗೆ ಹಾಗೆ ಕುಡಿಯುವ ಚಟವಿರಲಿಲ್ಲ. ಆದರೆ ನೆಗಡಿಯಾದಾಗ, ಒಣಮೀನು ಚಟ್ನಿ ನಂಚಿಕೊಂಡು ಡಬಲ್ ಸವರನ್ ಬ್ರಾಂಡಿಯನ್ನು ಅಮ್ಮನ ಸಮ್ಮತಿ ಮೇರೆಗೆ ಸ್ವೀಕರಿಸುತಿದ್ದನು. ಅವನ 'ಔಷ್ಧಿ' ಕಾರ್ಯಕ್ರಮ ನಾವೆಲ್ಲ ಮಲಗಿದ ಬಳಿಕ ಶುರುವಾಗುತ್ತಿತ್ತು. ನಾವು ಹೊದ್ದ ಕೌದಿಯೊಳಗಿನ ಕತ್ತಲಲ್ಲಿ ಎಚ್ಚರವಾಗಿದ್ದು, ಬಿರಟೆ ತೆಗೆದಾಗ ಹೊಮ್ಮುವ ಕಟುಗಂಪನ್ನು ಆಘ್ರಾಣಿಸುತ್ತ, ಅದರ ಒಗರಿಗೆ ಅಪ್ಪ ಸ್‌ಸ್‌ಸ್‌ಸೆಂದು ರೈಲಿಂಜಿನ್ ಉಗಿಬಿಡುವಂತೆ ಉಸಿರುಚೆಲ್ಲುವ ಹಾಗೂ ಲೋಟವನ್ನು ನೆಲಕ್ಕಿಕ್ಕುವ ಶಬ್ದಗಳನ್ನು ಚಲನಚಿತ್ರದ ದೃಶ್ಯಗಳಾಗಿ ರೂಪಾಂತರ ಮಾಡಿಕೊಳ್ಳುತ್ತಿದ್ದೆವು. ಅಪ್ಪ ಮಾರನೆಯ ದಿನ ಕುದುರೆಯಂತೆ ಓಡಾಡುತ್ತ ದುಡಿಮೆಗೆ ಸಜ್ಜಾಗುತ್ತಿದ್ದನು. ಮೈಮುರಿಯೆ ದುಡಿಮೆ ಮಾಡುವವರು 'ಎಣ್ಣೆ ಹಾಕಿ ಮಲಗಿದರೆ ಒಳ್ಳೆಯ ನಿದ್ದೆ ಬರುತ್ತದೆ; ಮೈಕೈ ನೋವು ಇರುವುದಿಲ್ಲ' ಎಂದು ಹೇಳುವರು. ವಿಜ್ಞಾನವಿನ್ನೂ ಸಾಬೀತು ಪಡಿಸಿರದ ಈ ಹೇಳಿಕೆಯನ್ನು ಸತ್ಯವೆಂದು ಮುಗ್ಧಲೋಕವೂ ನಂಬಿಬಿಟ್ಟಿದೆ. ಮನೆಗೆಲಸಕ್ಕೆ ಬರುತ್ತಿದ್ದ ಹುಲಿಗೆಮ್ಮ, ಭಾನುವಾರ ಬಂತೆಂದರೆ ಮಂಡೆ ತುರಿಸಿಕೊಳ್ಳುತ್ತ,'ಅಯ್ಯಾ, ಟೀ ಕುಡೀಬೇಕು, ಒಂದೈವತ್ತು?...' ಎಂದು ಬೇಡಿಕೆ ಇಡುತ್ತಿದ್ದಳು. 'ಟೀಗ್ಯಾಕಮ್ಮ ಅಷ್ಟೊಂದು ರೊಕ್ಕ? ನಮ್ಮಲ್ಲೇ ಕೊಡ್ತೀವಲ್ಲ, ಕುಡಿ' ಎಂದರೆ, 'ಬಟ್ಟೆ ತೊಳಿಯಾದು, ಪಾತ್ರೆ ಬೆಳಗಾದು, ಬಂಡೆ ಒರಸಾದು, ಗಿಡಕ್ಕೆ ನೀರು ಹಾಕಾದು ಮಾಡ್ತೀನಲ್ಲಯ್ಯಾ, ಶೀತ' ಎನ್ನುತ್ತಿದ್ದಳು. ಅವಳ ಮಾತಲ್ಲಿ ಇಂಥಾ ಕೆಲಸ ಮಾಡಿಸುವ ನೀವೇ ತಪ್ಪಿತಸ್ಥರು ಎಂಬ ಸೂಕ್ಷ್ಮದನಿಯೂ ಇರುತ್ತಿತ್ತು. ಶರಾಪು ಕುಡಿದರೆ ಹಿತ್ತಲಲ್ಲಿ ಕೆಲಸ ಮಾಡುವಾಗ ಸೊಳ್ಳೆ ಹತ್ತಿರ ಸುಳಿಯುವುದಿಲ್ಲ ಎಂದೂ ಆಕೆ ವಾದಿಸುತ್ತಿದ್ದಳು. ಅವಳ ಗಂಡ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದನು. ತಳ್ಳುಗಾಡಿಯಲ್ಲಿ ಕಾಯಿಪಲ್ಲೆ ಮಾರುತ್ತಿದ್ದ ಆತ ಕಾಲಿಗೆ ಪೆಟ್ಟಾದರೆ ದವಾಖಾನೆಗೆ ಹೋಗುತ್ತಿದ್ದಿಲ್ಲ. ಎರಡು ಪಾಕೀಟು ಸರಾಯಿಯಲ್ಲಿ ನಾಲ್ಕುಹನಿ ಗಾಯಕ್ಕೆ ಚಿಮುಕಿಸಿ ಉಳಿದುದನ್ನು ಬಾಯಿಗೆ ಸಮರ್ಪಿಸುತಿದ್ದನು. 'ಸರ್ವ ರೋಗಾನಿಕಿ ಸಾರಾಯಿ ಮದ್ದು' ಗಾದೆ ಇಂಥವರ ಕಂಡೇ ಹುಟ್ಟಿರಬೇಕು.

'ಮದ್ದು' ಎನ್ನುವಾಗ ಕಡಿದಾಳು ಶಾಮಣ್ಣನವರ ಮನೆಮದ್ದು ಚಳವಳಿ ನೆನಪಾಗುತ್ತಿದೆ. ದೇಶ–ಭಾಷೆ, ಖಾದಿ ವಿಷಯಗಳಲ್ಲಿ ಗಾಂಧಿವಾದಿಯಾದ ಅವರ ತಲೆಯಲ್ಲಿ ದೇಶೀಮದ್ಯದ ಕಲ್ಪನೆ ಹುಟ್ಟಿದ್ದು ಅಚ್ಚರಿಯೇನಲ್ಲ. 'ಕಾರ್ಖಾನೆಗಳಲ್ಲಿ ಮದ್ಯ ತಯಾರಿಸಿ ಮಾರುವುದು ತಪ್ಪು. ಜನ ತಮಗೆ ಬೇಕಾದ್ದನ್ನು ಸ್ಥಳೀಯ ವಸ್ತುಗಳಿಂದ ಮನೆಮದ್ದು ಮಾಡಿಕೊಳ್ಳುವರು. ಇದಕ್ಕೆ ಸರ್ಕಾರ ಅಡ್ಡಿಪಡಿಸಬಾರದು' ಎಂಬುದು ಅವರ ವಾದ. ನಾನು ಶಾಮಣ್ಣನವರ ಮಲೆನಾಡಲ್ಲಿ ಮೊಳಕೆಕಟ್ಟಿದ ಭತ್ತದಿಂದ ಮಾಡುವ ಅಕ್ಕಿಬೋಜವನ್ನೂ, ಕೊಡಗಿನ ಗೃಹಿಣಿಯರು ತಯಾರಿಸುವ ವೈನುಗಳನ್ನೂ, ಕೇರಳದ ತೆಂಗುನೀರಾವನ್ನೂ ಸವಿದಿರುವೆ. ಇವೆಲ್ಲ ಆಹಾರದ ಭಾಗವಾಗಿಯೇ ಇರುವ ಪೇಯಗಳು. ಮಲೆನಾಡಲ್ಲಿ ಮಳೆಗಾಲದಲ್ಲಿ ಬಾಣಂತಿಯರನ್ನು ಬೆಚ್ಚಗಿಡಲು ಬ್ರಾಂದಿ ಕೊಡುವ ಪದ್ಧತಿಯೂ ಇದೆ. ಕೆಲವು ಬಾಣಂತಿಯರು ಈ ಬಾಬತ್ತಿನಲ್ಲಿ ಹೆಚ್ಚುಕಡಿಮೆ ಮಾಡಿಕೊಂಡು ಪರಿಣಾಮ ವಿಪರೀತವಾಗಿರುವುದುಂಟು. ಯಾರೂ ಅಲ್ಲ, ನಮ್ಮ ಚಿಕ್ಕಮ್ಮ ಬಾಣಂತಿಯಾಗಿದ್ದಾಗ, ಥಂಡಿ ತಡೆಯದೆ ತಲೆದೆಸೆಯಿಲ್ಲಿದ್ದ ಕುಪ್ಪಿಯಿಂದ ಬ್ರಾಂದಿಯನ್ನು ಕಾಫಿಯಂತೆ ಕುಡಿದು, ತನ್ನಲ್ಲಿ ಏನನ್ನೊ ವಿಚಾರಿಸಲು ಬಂದ ಗಂಡನಿಗೆ ಕಂಚಿನ ಲೋಟದಿಂದ ಬೀಸಿ ಹೊಡೆದಿದ್ದಳು. ಈಗಲೂ ಚಿಕ್ಕಪ್ಪನ ಲಲಾಟದಲ್ಲಿ ಹರನ ಮೂರನೇ ಕಣ್ಣಂತೆ ಗಾಯದ ಚಿಹ್ನೆಯಿದೆ. ಯಾರಾದರೂ ಕೇಳಿದರೆ ಎಳವೆಯಲ್ಲಿ ಎಡವಿದ್ದು ಎನ್ನುವನು.